ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ/ ವಾರ್ಡ್ ಸಮಿತಿ/ ಸಹಾಯಕ ಅಭಿಯಂತರರು ರವರ ಕಛೇರಿ, ಕೋರಮಂಗಲ ವಾರ್ಡ್ 151, ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು

ದಿನಾಂಕ:23.06.2022

**-: ಸಭೆ ತಿಳುವಳಿಕೆ ಪತ್ರ :-**

ವಿಷಯ :- ದಿನಾಂಕ:24.06.2022 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್-151 ರ ನೋಡಲ್ ಅಧಿಕಾರಿಯವರಾದ ಶ್ರೀ ವನರಾಜ .ಪಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:24.06.2022 ರಂದು ಬೆಳಗ್ಗೆ 11.00 ಕ್ಕೆ ಸ್ಥಳ: **ಕೋರಮಂಗಲ ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು** ರಲ್ಲಿ ವಾರ್ಡಿಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಕಮಿಟಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು:** 1) ವಾರ್ಡಿನ ಘನತ್ಯಾಜ್ಯದ ಬಗ್ಗೆ 2) ವಾರ್ಡಿನಲ್ಲಿ ಕೋವಿಡ್-19ರ ಬಗ್ಗೆ 3) ಸಾರ್ವಜನಿಕರ ಮೂಲಭೂತ ಸೌಕರ್ಯಗಳ ಬಗ್ಗೆ 4) BWSSB, BESCOM & POLICE ಇಲಾಖೆಗಳ ಹಾಗೂ ತೆರಿಗೆ ವಸೂಲಾತಿಗಳ ಬಗ್ಗೆ ಈ ವಿಷಯಗಳಿಗೆ ಸಂಬಂಧಿಸದ ಮಾಹಿತಿಗಳೊಂದಿಗೆ ತಪ್ಪದೇ ಈ ಸಮಿತಿ ಸಭೆಗೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 151, ಕೋರಮಂಗಲ

ಪ್ರತಿಯನ್ನು:-

1. ಶ್ರೀ ಶಶಿಧರ್ .ಸಿ, ನೋಡಲ್ ಅಧಿಕಾರಿಗಳು ಹಾಗೂ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ. ಲೇಔಟ್ ವಿಭಾಗ) ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಆರೋಗ್ಯ ವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್ ವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿರ್ದೇಶಕರು, ತೋಟಗಾರಿಕೆ, ಬಿ.ಬಿ.ಎಂ.ಪಿ. (ದಕ್ಷಿಣ), ಜಯನಗರ, ಬೆಂಗಳೂರು ಸಲ್ಲಿಸಿದೆ.

Scanned by CamScanner

8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಂದಾಯ ಅಧಿಕಾರಿಗಳು, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
12. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
13. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಮಡಿವಾಳ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
15. ಸಹಾಯಕ ನಿರ್ದೇಶಕರು, ಪಶುಪಾಲನೆ ಇಲಾಖೆ, ಬಿ.ಬಿ.ಎಂ.ಪಿ.(ದ), ಸಜ್ಜನ್‌ರಾವ್ ವೃತ್ತ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
16. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ.(ವಿದ್ಯುತ್) ದಕ್ಷಿಣ ವಲಯ, ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ (WWM), ಯೋಜನೆ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
18. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿ.ಬಿ.ಎಂ.ಪಿ (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
19. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಳೆನೀರುಗಾಲುವೆ ವಿಭಾಗ (SWD), ಬಿಟಿಎಂ ಲೇಔಟ್ ವಿಭಾಗ ಮಾಹಿತಿಗಾಗಿ ಸಲ್ಲಿಸಿದೆ.
20. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ(RI)/ಮೇಜರ್ ರೋಡ್ಸ್ (ದಕ್ಷಿಣ) ಮಾಹಿತಿಗಾಗಿ ಸಲ್ಲಿಸಿದೆ.
21. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ (ಕೇಂದ್ರ), ಎಸ್.ಆರ್.ವೃತ್ತ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
22. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆರೆಗಳು ಯೋಜನೆ ಉಪವಿಭಾಗ, ಎಸ್.ಆರ್. ವೃತ್ತ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
23. ಕಛೇರಿ ಕಡತಕ್ಕೆ.

Scanned by CamScanner

Ward Committee Meeting Ward - 151 - Koramangala

148

Date: 24/06/2022

Day: Friday


| Sl No. | Name | Signature |
|---|---|---|
| 1. | Sri. P. Vanaraj [Nodal Officer] | P. [signature] 24/06 |
| 2. | Sri. M. Chandrappa | [signature] 24/6/22 |
| 3. | Smt. Padmashree Balaram | |
| 4. | Sri. M.A. Abbas | |
| 5. | Sri. K.N. Chandrashekar | |
| 6. | Sri. Vishwanath Kashyap | [signature] |
| 7. | Sri G.M. Shetty | |
| 8. | Dr. K. Umeshwara | [signature] |
| 9. | Sri. Jayaramu | |
| 10. | Smt. Neeraja Shetty | Neeraj |
| 11. | Sri M. Srinivas | |
| 12. | Sri. M. Sampangi Raju | M. Sampangi Raju |
| 13. | Sri. P. Chandrashekar [Secretary Ward 151] | [signature] |


Scanned by CamScanner

Date : 24/06/2022
Day : Friday

| Sl. No. | Name | Department | Signature |
|---|---|---|---|
| 1. | Gajanan Akkimaradi | BWSSB(JE) | [signature] |
| 02 | Sudhakar.c | BESCOM | [signature] |
| 03 | Md. Shadab Haider | Sr.H.I BBMP | [signature] |
| 04) | Mithun Kumar.M | BWSSB(WI) | [signature] 900847926[illegible] |
| 05) | Prasad.NS | AHI (SWM) | [signature] 8884441001 |
| | | | |

Scanned by CamScanner









Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೋರಮಂಗಲ ಉಪ-ವಿಭಾಗದ ವಾರ್ಡ್ ಸಂಖ್ಯೆ-151 (ಕೋರಮಂಗಲ)
## ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲದಲ್ಲಿ ದಿನಾಂಕ:24.06.2022 ರಂದು ಜೂನ್-2022 ರ ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151ರ ರವರ ಅಧ್ಯಕ್ಷತೆಯಲ್ಲಿ ಕೋರಮಂಗಲ ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್ ಕೋರಮಂಗಲ, ಬೆಂಗಳೂರು ಇಲ್ಲಿ ದಿನಾಂಕ:24.06.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರೊಂದಿಗೆ ನಡೆದ ಸಭೆಯ ನಡವಳಿಗಳು:-

**ಹಾಜರಿದ್ದ ಸದಸ್ಯರುಗಳು:**

1. ಶ್ರೀ ಎಂ. ಚಂದ್ರಪ್ಪ
2. ಶ್ರೀ ವಿಶ್ವನಾಥ್ ಕಶ್ಯಪ್
3. ಡಾ|| ಕೆ. ಉಮೇಶ್ವರ
4. ಶ್ರೀಮತಿ ನೀರಜಾ ಶೆಟ್ಟಿ
5. ಶ್ರೀ ಎಂ. ಸಂಪಂಗಿ ರಾಜು

**ಹಾಜರಿದ್ದ ಅಧಿಕಾರಿಗಳ ವಿವರಗಳು**

1. ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ಚಂದ್ರಶೇಖರ್ .ಪಿ., ಕಾರ್ಯದರ್ಶಿ, ವಾರ್ಡ್ ಸಮಿತಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್-151 ಕೋರಮಂಗಲ
3. ಶ್ರೀ ಗಜಾನನ ಅಕ್ಕಿಮರಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ ಸುಧಾಕರ್, ಬೆಸ್ಕಾಂ
5. ಶ್ರೀ ಎಂ.ಡಿ. ಸಾದಬ್ ಹೈದರ್, ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ
6. ಶ್ರೀ ಪ್ರಸಾದ್ .ಎಸ್.ಎಸ್. ಕಿರಿಯ ಆರೋಗ್ಯ ನಿರೀಕ್ಷಕರು, ಎಸ್.ಡಬ್ಲ್ಯೂ.ಎಂ.
7. ಶ್ರೀ ಮಿಥುನ್ ಕುಮಾರ್ .ಎಂ, ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.

* * * * * *

ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151 ರವರು ಮೊದಲಿಗೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಮತ್ತು ಇಲಾಖಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ವೀರ ಯೋಧರ ವನ ಪಾರ್ಕ್ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗವನ್ನು ಬೀದಿಬದಿ ವ್ಯಾಪಾರಿಗಳು ಆಕ್ರಮಿಸಿಕೊಂಡು ವ್ಯಾಪಾರ ವಹಿವಾಟು ಮಾಡುವುದರಿಂದ ಸಾರ್ವಜನಿಕರು ಪಾದಚಾರಿ ಮಾರ್ಗದಲ್ಲಿ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಅತಿಕ್ರಮಿಸಿರುವ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ಎಂ. ಚಂದ್ರಪ್ಪ ರವರು ಮಾತನಾಡಿ, ಆನಂದ್ ಸ್ವೀಟ್ಸ್ ಹಿಂಭಾಗದ ರಸ್ತೆಯಲ್ಲಿ ವಿದ್ಯುತ್ ಕಂಬ ವಾಲಿಕೊಂಡಿರುತ್ತದೆ. ಆದುದರಿಂದ ಸಂಬಂಧಪಟ್ಟ ಬೆಸ್ಕಾಂ ಸಿಬ್ಬಂಧಿಗಳು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿದರು.



Scanned by CamScanner

ಶ್ರೀ ಎಂ. ಚಂದ್ರಪ್ಪ ರವರು ಮಾತನಾಡಿ. ವಾರ್ಡ್ ವ್ಯಾಪ್ತಿಯ ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ಗಳು ರಸ್ತೆಯ ಮಟ್ಟಕ್ಕಿಂತ ತಳಮಟ್ಟದಲ್ಲಿದ್ದು, ಇದರಿಂದ ರಸ್ತೆಯಲ್ಲಿ ಸುಗಮವಾಗಿ ವಾಹನ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಇದನ್ನು ಸರಿಪಡಿಸುವಂತೆ ಸಭೆಯಲ್ಲಿ ಕೋರಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ. 3ನೇ, 4ನೇ ಮತ್ತು 6ನೇ ಬ್ಲಾಕ್ ಕೋರಮಂಗಲದಲ್ಲಿ ವಿದ್ಯುತ್ ಟ್ರಿಪ್ಪಿಂಗ್ ಆಗುತ್ತಿರುತ್ತದೆ. ಆದುದರಿಂದ ಸಂಬಂಧಪಟ್ಟ ಇಲಾಖೆಯವರು ಪರಿಶೀಲಿಸಿ. ಸರಿಪಡಿಸುವಂತೆ ಸಭೆಯಲ್ಲಿ ಕೋರಿದರು.

ಶ್ರೀ ನೀರಜಾ ಶೆಟ್ಟಿ ರವರು ಮಾತನಾಡಿ. ವಾರ್ಡ್‌ನಲ್ಲಿ ಪಾದಚಾರಿ ಮಾರ್ಗವನ್ನು ಬೀದಿಬದಿ ವ್ಯಾಪಾರಿಗಳು ಆಕ್ರಮಿಸಿಕೊಂಡು ವ್ಯಾಪಾರ ವಹಿವಾಟು ಮಾಡುವುದರಿಂದ ಸಾರ್ವಜನಿಕರು ಪಾದಚಾರಿ ಮಾರ್ಗದಲ್ಲಿ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಅತಿಕ್ರಮಿಸಿರುವ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಡಾ॥ ಉಮಾ ಮಹೇಶ್ವರ್ ರವರು ಮಾತನಾಡಿ, 2ನೇ 'ಸಿ' ಅಡ್ಡರಸ್ತೆ, ಕೆ.ಹೆಚ್.ಬಿ. ಕಾಲೋನಿಯಲ್ಲಿ ಇರುವ ಕಸವನ್ನು ತೆರವುಗೊಳಿಸುವಂತೆ ಸಭೆಗೆ ತಿಳಿಸಿದರು.

ಡಾ॥ ಉಮಾ ಮಹೇಶ್ವರ್ ಮತ್ತು ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ವಾರ್ಡ್‌ನಲ್ಲಿ ಇರುವ ಎಲ್ಲಾ ಉದ್ಯಾನವನಗಳಲ್ಲಿನ ವ್ಯಾಯಾಮ ಉಪಕರಣಗಳನ್ನು ಹಾಗೂ ಶೌಚಾಲಯಗಳನ್ನು ಸಾರ್ವಜನಿಕರು ಬಳಸುತ್ತಿರುವುದರಿಂದ ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಸಂಪಂಗಿ ರವರು ಮಾತನಾಡಿ, ಸಿದ್ಧಾರ್ಥ ಕಾಲೋನಿಯಲ್ಲಿರುವ ಮ್ಯಾನ್‌ಹೋಲ್‌ಗಳಲ್ಲಿ ಹೂಳುಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.

ಡಾ॥ ಉಮಾ ಮಹೇಶ್ವರ್ ಮತ್ತು ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ಹೂಳುಗಳನ್ನು ತೆರವುಗೊಳಿಸುವ ವಾಹನಗಳು ಕಡಿಮೆ ಇರುತ್ತದೆ. ಹೂಳುಗಳ ತೆರವು ಕಾರ್ಯ ಸಮರ್ಪಕವಾಗಿ ನಡೆಸಲು ಇನ್ನೂ ಹೆಚ್ಚಿನ ವಾಹನಗಳನ್ನು ನಿಯೋಜಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ವಾರ್ಡ್‌ನಲ್ಲಿ ಕಸವನ್ನು ಸಂಗ್ರಹಿಸುವ ಕಾರ್ಯವನ್ನು ವಾರಕ್ಕೆ 5 ದಿನ ಹಸಿಕಸ ಮತ್ತು 2 ದಿನ ಒಣಕಸ ಸಂಗ್ರಹಿಸುತ್ತಿರುತ್ತಾರೆ. ಆದರೆ ಮನೆಯ ತೋಟದ ಕಸವನ್ನು ಸಂಗ್ರಹಿಸಲು ವಾರದಲ್ಲಿ ಒಂದು ದಿನವನ್ನು ನಿಗಧಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಕ್ಕೆ ತಂದು ಮತ್ತು ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಚಂದ್ರಶೇಖರ್ .ಪಿ)
ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್–151 ಕೋರಮಂಗಲ

P. Vanaraj 24/06/2022
(ಶ್ರೀ ಪಿ. ವನರಾಜ)
ನೋಡಲ್ ಅಧಿಕಾರಿಗಳು ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು

<u>ಪ್ರತಿಯನ್ನು:</u>

1. ಕೇಂದ್ರ ಕಛೇರಿಯ bbmp198wardcommitte@gmail.com ಇ–ಮೇಲ್ ಮುಖಾಂತರ ಸಲ್ಲಿಸುತ್ತಾ ಬೃ.ಬೆಂ.ಮ.ಪಾಯ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕೋರಲಾಗಿದೆ.
2. ಕಛೇರಿ ಕಡತಕ್ಕೆ.



Scanned by CamScanner